# ವೀರ ಹನುಮ ಬಹು ಪರಾಕ್ರಮ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahity, Samputa 3.1 published by Kannada & Culture Dept, Govt of Karnataka, Bengaluru.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings mentioned without highlights are as per Ref. 1 and Ref. 2. Both are matching fully. The wordings as per Ref. 3 are given in yellow highlights.
5. **Note:** The singer has followed the lyrics in Ref. 3.

ರಾಗ: ಆನಂದ ಭೈರವಿ ತಾಳ: ರೂಪಕ

| | |
|---|---|
| ವೀರ ಹನುಮ ಬಹು ಪರಾಕ್ರಮ \|\| ಪ \|\| | ವೀರ ಹನುಮ ಬಹು ಪರಾಕ್ರಮ |
| ಸಜ್ಞಾನವಿತ್ತು ಪಾಲಿಸಯ್ಯ ಜೀವರುತ್ತಮ \|\| ಅಪ \|\| | ಸಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ |
| | |
| ರಾಮ ದೂತನೆನಿಸಿ ಕೊಂಡೆ ನೀ, ರಾಕ್ಷಸರ | ರಾಮ ದೂತನೆನಿಸಿ ಕೊಂಡೆ ನೀ, ರಾಕ್ಷಸರ |
| ವನವನೆಲ್ಲ ಜಯಿಸಿ ಬಂದೆ ನೀ | ವನವನೆಲ್ಲ ಕಿತ್ತು ಬಂದೆ ನೀ |
| ಜಾನಕಿಗೆ ಉಂಗುರವಿತ್ತು | ಜಾನಕಿಗೆ ಮುದ್ರೆ ಇತ್ತು |
| ಜಗತಿಗೆಲ್ಲ ಹರುಷವಿತ್ತು | ಜಗತಿಗೆಲ್ಲ ಹರುಷವಿತ್ತು |
| ಜಾತಿಮಣಿಯ ರಾಮಗಿತ್ತು | ಚೂಡಾಮಣಿಯ ರಾಮಗಿತ್ತು |
| ಲೋಕದಿ ಪ್ರಖ್ಯಾತನಾದೆ \|\| 1 \|\| | ಲೋಕಕೆ ಮುದ್ದೆನಿಸಿ ಮೆರೆವ |
| | |
| ಗೋಪಿಸುತನ ಪಾದ ಪೂಜಿಸಿ, ಗದೆಯ ಧರಿಸಿ | ಗೋಪಿಸುತನ ಪಾದ ಪೂಜಿಸಿ, ಗದೆಯ ಧರಿಸಿ |
| ಕೌರವರಾ ಬಲವ ಸವರಿಸಿ | ಬಕಾಸುರನ ಸಂಹರಿಸಿದೆ |
| ದ್ರೌಪದಿಯ ಮೊರೆಯ ಕೇಳಿ | ದ್ರೌಪದಿಯ ಮೊರೆಯ ಕೇಳಿ |
| ಕರುಣದಿಂದ ತ್ವರದಿ ಬಂದು | ಮತ್ತೆ ಕೀಚಕನ್ನ ಕೊಂದು |
| ಪಾಪಿ ಕೀಚಕನನು ಕೊಂದು | ಭೀಮನೆಂಬ ನಾಮ ಧರಿಸಿ |
| ಭೀಮ ಸೇನನೆನಿಸಿಕೊಂಡೆ \|\| 2 \|\| | ಸಂಗ್ರಾಮ ಧೀರನಾಗಿ ಜಗದಿ |
| | |
| ಮಧ್ಯಗೇಹನಲ್ಲಿ ಜನಿಸಿ ನೀ ಬಾಲ್ಯದಲ್ಲಿ | ಮಧ್ಯಗೇಹನಲ್ಲಿ ಜನಿಸಿ ನೀ ಬಾಲ್ಯದಲ್ಲಿ |
| ಮಸ್ಕರೀಯ ರೂಪಗೊಂಡೆ ನೀ | ಮಸ್ಕರೀಯ ರೂಪಗೊಂಡೆ ನೀ |
| ಸತ್ಯವತಿಯ ಸುತನ ಭಜಿಸಿ | ಸತ್ಯವತಿಯ ಸುತನ ಭಜಿಸಿ |

| | |
|---|---|
| ಸಮ್ಮುಖದಲಿ ಭಾಷ್ಯ ಮಾಡಿ | ಸಮ್ಮುಖದಿ ಭಾಷ್ಯ ಮಾಡಿ |
| ಸಜ್ಜನರನು ಪಾಲಿಸಿದ ಪು- | ಸಜ್ಜನರ ಪೊರೆವ ಮುದ್ದು |
| ರಂದರ ವಿಠಲನ ದಾಸ ‖ 3 ‖ | ಪುರಂದರ ವಿಠಲನ ದಾಸ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದದಲ್ಲಿ ವಾಯು ದೇವರ ಮೂರೂ ಅವತಾರಗಳ ಸ್ತುತಿ ಇದೆ.

**ಜಾತಿಮಣಿ** = ಶ್ರೇಷ್ಠ ರತ್ನ, ಚೂಡಾ ರತ್ನ - ಚೂಡಾ ರತ್ನವನ್ನು ಹನುಮಂತನ ಸಂಗಡ ರಾಮನಿಗೆ ಸೀತಾದೇವಿ ಕಳಿಸಿ ಕೊಟ್ಟಳು

**ಗೋಪಿಸುತ** = ಯಶೋದೆ ಮಗ, ಕೃಷ್ಣ

**ಮಸ್ಕರಿ** = ಸನ್ಯಾಸಿ, (ಮಸ್ಕರ ಎಂದರೆ ಬಿದಿರಿನ ಬಡಿಗೆ, ದಂಡ)

**ಸತ್ಯವತಿಯ ಸುತ** = ಶ್ರೀ ವೇದವ್ಯಾಸರು

**ಸತ್ಯವತಿ** = ಉಪರಿಚರ ವಸುವಿನ ಮಗಳು. ಯಮುನಾ ನದಿಯ ದಂಡೆಯಲ್ಲಿರುವ ದಾಶರಾಜನು ಈಕೆಯನ್ನು ಸಾಕಿ ಸಲಹಿದನು. ಈಕೆಗೆ ಮತ್ಸ್ಯಗಂಧೆ ಎಂಬ ಹೆಸರಿದ್ದಿತು. ಪರಾಶರನಿಂದ ಈಕೆಯಲ್ಲಿ ವೇದವ್ಯಾಸರು ಹುಟ್ಟಿದರು.

**ಸತ್ಯವತಿಯ ಸುತನ ಭಜಿಸಿ ಸಮ್ಮುಖದಲಿ ಭಾಷ್ಯ ಮಾಡಿ :** ವಾಯು ಸ್ತುತಿ

**Classification:** Keerthane
**Ankita:** purandara vittala
**Location:** NA
**Category:** Hanuma Stuti
**Group Words:** hanuma, rama, asura, sita, choodamani, krishna, bakasura, draupadi, pandava, kichaka, vira, madhwacharya, kaadu, bhima, madhva,
**Pravachana:** NA
**Explanation:** NA